ಕರ್ನಾಟಕ ರೇಷ್ಮೆ ಕೈಗಾರಿಕಾ ನಿಗಮದ ಲಾಭ ನಷ್ಟ

2017 - ಶ್ರೀ ಹೆಚ್.ಎಮ್. ರೇವಣ್ಣ (ಮಾಗಡಿ) : ಮಾನ್ಯ ರೇಷ್ಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು ಯಾವಾಗ ಪ್ರಾರಂಭವಾಯಿತು ಹಾಗೂ ಇದರ ಸಂಯುಕ್ತ ರೇಷ್ಮೆ ಕೈಗಾರಿಕಾ ಘಟಕಗಳು ಯಾವುವು?

ಆ) ಕೆ.ಎಸ್.ಐ.ಸಿ.ಯ ಲಾಭ ನಷ್ಟವೆಷ್ಟು?

ಇ) ಕೆ.ಎಸ್.ಐ.ಸಿ ಯು ನಷ್ಟದಲ್ಲಿ ನಡೆಯುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಶ್ರೀ ವಿ. ಮುನಿಯಪ್ಪ (ರೇಷ್ಮೆ ರಾಜ್ಯ ಸಚಿವರು)

ಅ) ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತವು 1980ನೇ ಇಸವಿಯಲ್ಲಿ ಪ್ರಾರಂಭವಾಯಿತು.ಇದರ ಘಟಕಗಳು ಯಾವುವೆಂದರೆ,

1. ರೇಷ್ಮೆ ನೇಯ್ಗೆ ಕಾರ್ಖಾನೆ, ಮೈಸೂರು
2. ಜೂಟು ರೇಷ್ಮೆ ಗಿರಣಿ, ಚನ್ನಪಟ್ಟಣ
3. ರೇಷ್ಮೆ ನೂಲು ತೆಗೆಯುವ ಘಟಕ, ಟಿ.ನರಸೀಪುರ-
4. ರೇಷ್ಮೆ ನೂಲು ತೆಗೆಯುವ ಘಟಕ, ಕನಕಪುರ

ಆ) ಕೆ.ಎಸ್.ಐ.ಸಿ. ಯು 1980ನೇ ಸಾಲಿನಿಂದ ಇದುವರೆವಿಗೂ ರೂ.2545-38 ಲಕ್ಷಗಳ ನಷ್ಟವನ್ನು ಅನುಭವಿಸಿದೆ.

ಇ) ಹೌದು.

ದಕ್ಷಿಣ ಕನ್ನಡ ಜಿಲ್ಲೆಯು ಬೀಡಿ ಕಾರ್ಮಿಕರಿಗೆ ಸಾಲ

2028 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು?

ಆ) ಈ ಬೀಡಿ ಕಾರ್ಮಿಕರಿಗೆ ಸರ್ಕಾರದಿಂದ ಯಾವುದೇ ಸಾಲ ಮಂಜೂರಾಗಿದೆಯೇ?

ಇ) ಈ ಕಾರ್ಮಿಕರ ಅಭಿವೃದ್ಧಿಗೆ ಸರ್ಕಾರ ಸಾಲ ರೂಪದಲ್ಲಿ ನೆರವು ನೀಡುವುದೇ?

ಈ) ಈ ಬೀಡಿ ಕಾರ್ಮಿಕರಲ್ಲಿ ಎಷ್ಟು ಜನರಿಗೆ ಮನೆಗಳನ್ನು ಕಟ್ಟಿಸಿ ಕೊಡಲಾಗಿದೆ. ಇನ್ನು ಮುಂದೆ ಎಷ್ಟು ಮನೆಗಳನ್ನು ಕಟ್ಟಿ ಕೊಡುವ ಯೋಜನೆ ಇದೆ?

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು)

ಅ) 2,21,587

ಆ) ಇಲ್ಲ.

ಇ) ಅಂತಹ ಯೋಜನೆ ಯಾವುದೂ ಇರುವುದಿಲ್ಲ.

ಈ) ಈ ಇಲಾಖಾವತಿಯಿಂದ ಬೀಡಿ ಕಾರ್ಮಿಕರಿಗೆ ಮನೆ ಕಟ್ಟುವ ಯೋಜನೆ ಯಾವುದೂ ಇರುವುದಿಲ್ಲ.